ಉತ್ಸಾಹದಿಂದ ಸ್ವಾಗತಿಸುವುದಿಲ್ಲ. ಸಾಧ್ಯವಾದಲ್ಲೆಲ್ಲ ಅವರನ್ನು ಅಲ್ಲಿಂದ ಓಡಿಸಲೇ ನೋಡುತ್ತದೆ. ಅಂತಹದುನ್ನೆಲ್ಲ ಮೆಟ್ಟಿ ನಿಲ್ಲಲು ವಿಶೇಷ ತಾಕತ್ತು ಮತ್ತು ಧೈರ್ಯ ಬೇಕಾಗುತ್ತದೆ. ಆಗಲೇ ಸೋತು ಹೈರಾಣಾಗಿದ್ದ ಚಿಕ್ಕ ಹುಡುಗನಿಗೆ ಆ ತಾಕತ್ತೂ ಇರಲಿಲ್ಲ. ಅವನಿಗೆ ತಿಳಿದ ಒಂದೇ ದಾರಿಯೆಂದರೆ ಯಾವ ರೈಲ್ವೇ ಸ್ಟೇಶನ್ನಿನಲ್ಲಿ ಇಳಿದಿದ್ದನೋ ಅಲ್ಲೇ ಇನ್ನೊಂದು ಟ್ರೈನಿಗಾಗಿ ಕಾಯುವುದು ಮತ್ತು ಮುಂದಿನ ಊರಿಗೆ ತೆರಳುವುದು. ಮತ್ತೆ ಅದೇ ಪುನರಾವರ್ತನೆ. ಟಿಕೆಟ್ ಚೆಕ್ಕಿಂಗಿನವರ ಹತ್ತಿರ ಒದೆ. ಹಾಗೆ ನಾಲ್ಕೈದು ಬಾರಿ ಒದೆಸಿಕೊಂಡು ಒಂದು ಊರನ್ನು ತಲುಪಿದ್ದ. ಅದು ದೇಶದ ಯಾವುದೇ ಭಾಗದ ಅನಾಥರನ್ನೂ, ಗತಿಯಿಲ್ಲದವರನ್ನೂ ತೆರೆದ ಕೈಗಳಿಂದ ಸೆಳೆದುಕೊಳ್ಳುವ ಮುಂಬಯಿ. ಅಲ್ಲಿ ಇಳಿದವ ಅಲ್ಲೇ ಸ್ಟೇಷನ್ನಿನಲ್ಲಿ ಉಳಿಯಲಿಲ್ಲ. ಅಲ್ಲ... ಅಲ್ಲಿನ ಜನಪ್ರವಾಹ ಅವನನ್ನು ಅಲ್ಲಿ ಉಳಿಯಲು ಬಿಟ್ಟಿರಲಿಲ್ಲ. ತನ್ನೊಂದಿಗೇ ಅವನನ್ನೂ ಸೆಳೆದುಕೊಂಡು ಹೋಗಿತ್ತು. ಊರಿನ ಜನ ಜಂಗುಳಿಯೊಂದಿಗೆ ಸೇರಿ ಹೋಗಿದ್ದ.

ಸುರು ಸುರುವಿಗೆ ದಿಗ್ಭ್ರಮೆ ಹುಟ್ಟಿಸುವಷ್ಟು ಅವಕಾಶಗಳನ್ನು ಒದಗಿಸುತ್ತಿದ್ದ ಆ ಜನಜಂಗುಳಿಯಲ್ಲಿ ಕಂಗಾಲಾಗಿದ್ದ. ಆದರೂ ಆ ಕಂಗಾಲಿನ ನಡುವೆಯೇ ಬದುಕಬಲ್ಲೆ ಎನ್ನುವ ಧೈರ್ಯ ನಿಧಾನವಾಗಿ ತುಂಬುತ್ತ ಬಂದದ್ದೂ ಹೌದು. ಹಿಂದೆ ಊರಿನಲ್ಲಿದ್ದಷ್ಟೂ ದಿನ ಅವನನ್ನು ಕಾಡುತ್ತಿದ್ದ ಅನಾಥ ಪ್ರಜ್ಞೆ ತುಸು ತುಸುವಾಗಿ ದೂರವಾಗತೊಡಗಿತ್ತು. ಪರಿಚಯವೇ ಇಲ್ಲದ ಸುತ್ತ ಮುತ್ತಲ ಮಂದಿ ತನ್ನವರೇ ಅನ್ನಿಸತೊಡಗಿತ್ತು. ಸಿಕ್ಕಿದ ಕೆಲಸ ಮಾಡುತ್ತ ತನ್ನ ಅನ್ನವನ್ನು ತಾನೇ ಸಂಪಾದಿಸಿಕೊಳ್ಳುವಾಗ ಈ ಹಿಂದೆ ಎಂದೂ ಅವನ ಮನಸ್ಸಿನಲ್ಲಿ ಬರದಂತಹ ಸ್ವಂತಿಕೆಯ ಭಾವನೆ ಒಡಮೂಡತೊಡಗಿತ್ತು. ಪ್ರಯತ್ನ ಪಟ್ಟರೆ ತನ್ನ ಕಾಲ ಮೇಲೆ ತಾನೇ ನಿಲ್ಲುವುದು ಕಷ್ಟವೇನೂ ಆಗಲಿಕ್ಕಿಲ್ಲ ಎನ್ನುವುದು ದೃಢವಾಗಹತ್ತಿತ್ತು.

ತಿಂಗಳುಗಳು ಕಳೆಯುತ್ತ ಬಂದಾಗ ಅವನು ತನ್ನ ಭವಿಷ್ಯವನ್ನು ತುಸು ಒಳ್ಳೆಯದನ್ನಾಗಿ ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ಆಲೋಚಿಸತೊಡಗಿದ್ದ. ಕಲಿತ ಎಸ್ಸೆಸ್ಸೆಲ್ಸಿ ಬದುಕಿನಲ್ಲಿ ಬಹಳ ಮುಂದೆ ಹೋಗಲು ಸಾಕಾಗಲಿಕ್ಕಿಲ್ಲ ಎನ್ನುವ ಅರಿವು ಮೂಡುವುದರ ಜೊತೆಗೆ ಬಿಟ್ಟು ಬಂದ ಊರಿನಲ್ಲಿದ್ದ ತನ್ನನ್ನು ಮೆಚ್ಚಿದ ಹಾಗೂ ತಾನೂ ಮೆಚ್ಚಿದ ಆ ಒಂದು ಜೀವವನ್ನು ಜೊತೆಗಾತಿಯಾಗಿ ಮಾಡಿಕೊಳ್ಳಲಿಕ್ಕಾಗಿಯಾದರೂ ತಾನು ಬೆಳೆಯಬೇಕು ಅನ್ನಿಸಹತ್ತಿತ್ತು.

ಮನಸ್ಸಿಗೆ ಬಂದದ್ದೇ ಮತ್ತೆ ತಡಮಾಡಲಿಲ್ಲ ಆತ. ಕಾರ್ಯಪ್ರವರ್ತನಾದ. ಆಗಲೇ ಗುರುತು ಮಾಡಿಕೊಂಡವರನ್ನು ಮಾತನಾಡಿಸಿದ. ಅಗತ್ಯಕ್ಕಾಗಬಹುದು ಎನಿಸಿದವರನ್ನು ಹೊಸತಾಗಿ ಗುರುತು ಮಾಡಿಕೊಂಡ. ಇವನೆಡೆಗೆ ವಿಚಿತ್ರವಾಗಿ ನೋಡಿದರೂ ಗುರುತೇ ಇಲ್ಲದವರನ್ನೂ ಮಾತನಾಡಿಸಿದ.

ಮುಂದಿನ ದಾರಿ ಸ್ಪಷ್ಟವಾಗತೊಡಗಿತು. ನಿಂತು ಹೋದ ಓದನ್ನು ಮುಂದುವರಿಸುವುದು ಮತ್ತು ಈಗಿರುವ ಹೊಟ್ಟೆ ತುಂಬಿಸುವ ದಾರಿಯನ್ನು ಬಿಡದೇ ಇರುವುದು. ಒಂದೋ ರಾತ್ರಿ ಹೊತ್ತಿನಲ್ಲಿ ಕೆಲಸ ಮಾಡಿ ಹಗಲು ಕಲಿಕೆಯನ್ನು ಮುಂದುವರಿಸುವುದು ಅಥವಾ ಹಗಲು ಈಗ ಮಾಡುತ್ತಿರುವಂತೆಯೇ ಕೆಲಸವನ್ನು ಮಾಡುತ್ತ ರಾತ್ರಿ ಕಾಲೇಜಿಗೆ ಸೇರಿಕೊಳ್ಳುವುದು. ಇವೆರಡರಲ್ಲಿ ಹಗಲೆಲ್ಲ ಕೆಲಸ ಮಾಡಿ ರಾತ್ರಿ ಕಾಲೇಜಿನಲ್ಲಿ ಓದು ಮುಂದುವರಿಸುವುದೇ ಪ್ರಶಸ್ತವಾಗಿ ಕಂಡಿತ್ತು. ಅದೇ ಅನಿಸಿಕೆಯಲ್ಲಿ ಒಂದು ಸಂಜೆ ಕಾಲೇಜಿನ ಆವರಣದೊಳಗೆ ಕಾಲಿಟ್ಟಾಗಲೇ ತಿಳಿದದ್ದು ಅವನಿಗೆ ತನ್ನಂತಹವರು ಈ ಮಹಾ ನಗರದಲ್ಲಿ ಎಷ್ಟು ಮಂದಿ ಇದ್ದಾರೆ ಎನ್ನುವುದು.